ಕೆಲವು ಭೌತಿಕ ವಿವರಗಳ ಬಗ್ಗೆ ಮಾತನಾಡುವರು. ನಾನು ಇವನ್ನೆಲ್ಲಾ ಒಂದು ಟಿಪ್ಪಣಿ ಪುಸ್ತಕದಲ್ಲಿ, ಟಿಪ್ಪಣಿ ಮಾಡಿಕೊಳ್ಳುತ್ತಿದ್ದೆ. ವರದಿಯ ಒಂದು ಕರಡನ್ನು ಅವರು ತಯಾರಿಸುವುದು, ಒಂದು ನಾನು ತಯಾರಿಸುವುದು, ಎರಡನ್ನೂ ಒಟ್ಟಿಗೆ ಇಟ್ಟುಕೊಂಡು, ಅಂತಿಮ ವರದಿಯನ್ನು ನಾನು ಅಥವಾ ಅವರು ತಯಾರಿಸುತ್ತಿದ್ದೆವು. ನಾನು ತಯಾರಿಸಿದಾಗ ಅವರು ಬರಹದ ಭಾಷಾರಚನೆಯ ಜೊತೆಗೆ, ಕೆಲವು ಸಾಮಾನ್ಯ ವಿವರಗಳು ನಮೂದಾಗಿವೆಯಾ ಎಂದು ಕಣ್ಣಿಟ್ಟು ನೋಡಿ, ಇಲ್ಲದಿದ್ದರೆ ಸೇರಿಸಲು ಸೂಚಿಸುವರು; ಆ ವಿವರವನ್ನು ಟಿಪ್ಪಣಿ ಮಾಡಿಕೊಂಡಿರದಿದ್ದರೆ



ಹೇಗಾದರೂ ಸಂಗ್ರಹಿಸುವಂತೆ ಸೂಚಿಸುವರು. ಅಷ್ಟು ಮಾತ್ರವಲ್ಲದೆ, ನಾವು ವರದಿ ಮಾಡಿದ ಘಟನೆಗೆ ಸಂಬಂಧಿಸಿದಂತೆ ನ್ಯಾಯಕ್ಕೆ ಆಗ್ರಹಿಸಲು ಸಾರ್ವಜನಿಕ ಪ್ರತಿಭಟನೆ ಮಾಡಿದಾಗ, ಸ್ಥಳೀಯರು ಯಾರಾದರೂ ನಾವು ಗಮನಿಸಿದ ವಿವರ ತಿಳಿಸಿದಾಗ, ರಾಜಶೇಖರ್ ಆ ಸ್ಥಳೀಯರ ಬಳಿ ಹೋಗಿ – 'ನೋಡಿ, ನಾವು ಈ ವಿವರ ಗಮನಿಸಿಯೇ ಇರಲಿಲ್ಲ! ನೀವು ಹೇಳಿದ್ದು ಒಳ್ಳೆಯದಾಯ್ತು' ಎನ್ನುವರು.

ಮೊದ ಮೊದಲಿಗೆ ನನಗೆ, ಈ ವಿವರಗಳು ಹಿಂಸೆಯ ನಿರೂಪಣೆಗೆ ಹೇಗೆ ಮುಖ್ಯ ಅನಿಸುತ್ತಿತ್ತು. ಹಾಗೆಯೇ, ನಾವು ಒಂದು ಹತ್ತು ಘಟನೆಗಳನ್ನು ಪರಿಶೀಲಿಸಿದರೆ, ಅವುಗಳಿಗೆ ಒಂದು ಸಾಮಾನ್ಯವಾದ ರೂಪ ಇರುವುದು ವಿದಿತವಾಗುತ್ತಿದ್ದರೂ, ಪ್ರತಿ ಘಟನೆ ನಡೆದಾಗ ಸ್ಥಳಕಲಿಕೆಗೆ ಯಾಕೆ ಹೋಗಬೇಕು ಎಂಬ ಅನುಮಾನವೂ ಬರುತ್ತಿತ್ತು. ರಾಜಶೇಖರ ಈ ಸಾಮಾನ್ಯ ಸಂಗತಿಗಳ ಬಗ್ಗೆ ಯಾಕೆ ಆಸಕ್ತಿ ವಹಿಸುತ್ತಿದ್ದರು? ಹಲವು ಸಾರಿ ರಾಜಶೇಖರ, ಶಿವರಾಮ ಕಾರಂತರು, ಎ.ಕೆ. ರಾಮಾನುಜನ್ ಹಾಗೂ ಮಾರ್ಕ್ವೆಜ್‌ರ ಬರಹಗಳಲ್ಲಿ ನಿರೂಪಿತವಾಗುವ ನಿತ್ಯ ಸಾಮಾನ್ಯ ವಿವರಗಳ ಬಗ್ಗೆ ಗಮನ ಸೆಳೆದು, 'ಒಳ್ಳೆಯ ಬರಹಗಾರರ ಗುಣವದು...' ಎನ್ನುವರು; ಕಾರಂತರ ಕಾದಂಬರಿಗಳಲ್ಲಿ ಬರೀ ಬ್ರಾಹ್ಮಣ ಕುಟುಂಬಗಳ ದಟ್ಟವಾದ ವಿವರಗಳನ್ನು ಮಾತ್ರ ನಾವು ಕಾಣುತ್ತೇವೆ, ಅದರ ಸುತ್ತ ಬ್ರಾಹ್ಮಣೇತರರ ಬದುಕು ಇದ್ದಾಗಲೂ ಕಾರಂತರಿಗೆ ಆ ಬದುಕಿನ ವಿವರಗಳು ಯಾಕೆ ಕಾಣೋದಿಲ್ಲ! ಎಂಬ ಭಿನ್ನಮತ ಎತ್ತುವರು. ಈ ಸೂಚನೆಗಳನ್ನೂ, ಅವರ ಬರಹಗಳ ಓದನ್ನೂ ಹೆಣೆದು, ಅವರ ಈ ಕಾಳಜಿಯನ್ನು ಅರಿಯಬಹುದೇನೋ?

2005ರ ಮಾರ್ಚ್ 14ನೇ ತಾರೀಕು ಉಡುಪಿಯಲ್ಲಿ, ದನಸಾಗಾಟ ಮಾಡುತ್ತಿದ್ದಾರೆಂಬ ನೆಪ ಒಡ್ಡಿ ಹಾಜಬ್ಬಾ ಎಂಬ 65 ವರ್ಷದ ಹಿರಿಯರನ್ನು, 28 ವರ್ಷದ ಅವರ ಮಗ ಹಸನಬ್ಬರನ್ನು ಹಿಂದೂ ಯುವಸೇನೆಯ 50 ಜನರ ಗುಂಪು ಬೆತ್ತಲೆಗೊಳಿಸಿ, 200ಕ್ಕೂ ಮಿಕ್ಕಿದ ಸಾರ್ವಜನಿಕರ ಕಣ್ಣೆದುರೇ ಥಳಿಸಿತು. ಆ ಘಟನೆಯ ಕುರಿತು ಲೇಖನ ಬರೆದ ರಾಜಶೇಖರ, ತಾವು ಆಸ್ಪತ್ರೆಗೆ ಅವರನ್ನು ನೋಡಲು ಹೋದಾಗಿನ ಘಟನೆಯನ್ನು ಹೀಗೆ ವಿವರಿಸುತ್ತಾರೆ:

"...ಅವರ ಬೆಡ್ಡುಗಳ ಸುತ್ತ ಅವರ ಮನೆಯವರು ಮತ್ತು ಬಂಧುಬಳಗದವರು ನಿಂತಿದ್ದರು. ಹಸನಬ್ಬರ ತಾಯಿ, ಅಂದರೆ ಹಾಜಬ್ಬನವರ ಪತ್ನಿಯೂ ಇದ್ದರು. ಯಾರನ್ನು ಕಂಡರೂ ಅವರಿಗೆ ಅಳುವೇ ಒತ್ತರಿಸಿ ಬರುತ್ತಿತ್ತು.

ಹೌದು, ಈ ವಿಷಯವನ್ನು ಹೇಳಲೇಬೇಕು. ಮುಸಲ್ಮಾನರಿಗೂ ತಾಯಿ ತಂದೆ, ಅಕ್ಕ ತಂಗಿ, ಬಂಧುಬಳಗ ಎಲ್ಲ ಇರುತ್ತಾರೆ. ಅವರು ಇಲ್ಲಿಯೇ ಹುಟ್ಟಿ ಬೆಳೆದವರು. ನಮ್ಮ ಹಾಗೆಯೇ ನಮ್ಮ ದೇಶದ ಪ್ರಜೆಗಳು ಮತ್ತು ಸಂಸಾರವಂದಿಗರು. ಇವು ಬಹಳ ಸರಳವಾದ ಸತ್ಯಗಳು. ಆದರೆ, ಉಡುಪಿಯಲ್ಲಂತೂ ಇದನ್ನು ಮತ್ತೆ ಮತ್ತೆ ಹೇಳಬೇಕಾದ ಅವಶ್ಯಕತೆ ಇದೆ."